51st Year of Publication ★ SATYAVADI Daily, MYSORE 4

Reg No B G 155 21 - 5 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸತ್ಯವಾದಿ

Space available

For Permanent Advertisement

ಸ್ಥಾಪಕರು : ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಉಪಾಧ್ಯಾಯರ ಸಂಬಳ ರೂ. 300 ಕ್ಕೆ ಕಡಮೆ ಇರಬಾರದು

ಮೈಸೂರು ಅಪೇರಾ ಟಾಕೀಸ್ ಬಳಿ ಹಾಕಿರುವ ತಮ್ಮ ಸ್ವಂತ ಭವ್ಯ
ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರಿಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯವಾದ ಇಂದ್ರಜಾಲಾಟ ನಡೆಯುವ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷಿಪ್ರದಲ್ಲೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು ಶ್ರೀಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದಷ್ಟು ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ಬೇಡಿಕೆ, ಈಡೇರುವುದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಸಾಮೂಹಿಕ ಮದುವೆ

ಬಾಂಬೆಯಲ್ಲಿ— ಇಲ್ಲಿಯ ಚರ್ಚಿನಲ್ಲಿ 16 ದಂಪತಿಗಳ ವಿವಾಹ ನಡೆಯಿತು — ಈ ಧರ್ಮಕರಿಂದ ಸ್ಥಾಪಿತವಾಗಿರುವ ನಿಧಿಯಿಂದ ಈ ಮದುವೆಗಳು ನೆರವೇರಿಸಲಾಯಿತು — ಈವರೆಗೆ ಇಂತಹ 142 ವಿವಾಹಗಳು ನೆರವೇರಿವೆ.

ಸ್ತುತ್ಯ ಸಲಹೆ

ಬೊಂಬಾಯಿ— ಯಾವ ಕಾಂಗ್ರೆಸಿಗರೂ ಅಧಿಕಾರವನ್ನೂ, ಪಾರ್ಲಿಮೆಂಟು ಅಥವಾ ಶಾಸನಸಭಾ ಸದಸ್ಯತ್ವವನ್ನೂ 10 ವರ್ಷಕ್ಕಿಂತ ಹೆಚ್ಚು ಕಾಲ ಹೊಂದಿರಬಾರದೆಂದು ಮಹಾರಾಷ್ಟ್ರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ವಸಂತರಾವ್ ಹೇಳಿರುವರು.

★

ಎಸ್ಸೆಸ್ಸೆ ಚಳವಳಿ

ಬೆಂಗಳೂರು— ತಾ|| 9 ರಂದು ಎಸ್ಸೆಸ್ಸೆ ಪ್ರಾರಂಭಿಸಿದ ಚಳವಳದಲ್ಲಿ ಇಲ್ಲೀವರೆಗೆ 1700 ಮಂದಿ ದಸ್ತಗಿರಿಗೆ ಮುಂದಾಗಿ ಬಂದಿರುವರೆಂದು ಎಸ್ಸೆಸ್ಸೆ ನಾಯಕ ಶ್ರೀ ಗೋಪಾಲಗೌಡರು ಹೇಳಿದರು — ತಾವು ತಾ|| 27 ರಂದು ತೀರ್ಥಹಳ್ಳಿಯಲ್ಲಿ ಸತ್ಯಾಗ್ರಹ ನಡೆಸುವುದಾಗಿ ಹೇಳಿದರು.

★

ಕನ್ನಡ ಚಳವಳ

ಮೈಸೂರು— ರಾಜ್ಯಮಟ್ಟದಲ್ಲಿ ಕನ್ನಡವು ಆಡಳಿತ ಭಾಷೆಯಾಗಿರಬೇಕೆಂದು ಕನ್ನ ಚಳವಳಗಾರರು ಶ್ರೀಗಳಾದ ವಾಟಾಳ್ ನಾಗರಾಜ್ ಮತ್ತು ವೇದಾಂತಂ ಹೆಮ್ಮಿಗೆ ರವರ ನೇತೃತ್ವದಲ್ಲಿ ನಿನ್ನೆ ಡೆಪ್ಯೂಟಿಕಮಿಷನರ ಆಫೀಸಿನಲ್ಲಿ ಪಿಕೆಟ್ ಮಾಡಲು ಪ್ರಯತ್ನಿಸಿದರು — ಪೊಲೀಸರು ಇವರನ್ನು ಎತ್ತಿ ತಂದು ಬಿಟ್ಟರು

ಸಕ್ಕರೆ ಬಿಡುಗಡೆ

ನವದೆಹಲಿ— ರಾಜ್ಯ ಸರಕಾರಗಳಿಗೆ 110000 ಟನ್ ಮತ್ತು ಬಹಿರಂಗ ಮಾರುಕಟ್ಟೆಗೆ 90000 ಟನ್ ಸಕ್ಕರೆ ಬಿಡುಗಡೆಗೆ ಕೇಂದ್ರ ಸರಕಾರ ಆಜ್ಞೆ ಮಾಡಿದೆ.

★

ನವೀನ ರೀತಿಯ ಸಭೆ

ಮದರಾಸು— ರಾಜ್ಯಗಳಿಗೆ ಕೇಂದ್ರ ಸಹಕಾರದ ಮಾದರಿಯನ್ನು ಚರ್ಚಿಸಲು ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆ ನಡೆಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ಅಣ್ಣಾದೊರೈ ಹೇಳಿದರು.

★

ಡಾ|| ಮೋದಿ ಮೆಡಲ್

ಮೈಸೂರು— ಪದ್ಮಭೂಷಣ ಡಾ || ಎಂ ಸಿ ಮೋದಿಯವರು, ತಮ್ಮ ಹೆಸರಿನಲ್ಲಿ ಭಂಗಾರ ಪದಕವನ್ನು ನೇತ್ರ ಚಿಕಿತ್ಸೆಯಲ್ಲಿ ಉತ್ತೀರ್ಣಗೊಳ್ಳುವ ವಿದ್ಯಾರ್ಥಿಗೆ ಪ್ರತಿ ವರ್ಷ ಕೊಡಲು ವಿಶ್ವವಿದ್ಯಾನಿಲಯಕ್ಕೆ ರೂ. 13000 ಕೊಟ್ಟಿರುವರು.

★

ಪ್ರಾಮಾಣಿಕತೆ

ಬೆಂಗಳೂರು— ಒಂದು ಮದುವೆ ತಂಡದವರು ಕುಮಾರಾ ಪಾರ್ಕಿಗೆ ಹೋಗಲು ಒಂದು ಟ್ಯಾಕ್ಸಿ ನೇಮಿಸಿದರು. ಅಲ್ಲಿಗೆ ತಲಪಿದಾಗ ಅದರಲ್ಲಿಟ್ಟಿದ್ದ ಆಭರಣ ಮತ್ತು ಸೂಟ್‌ಕೇಸನ್ನು ತೆಗೆದುಕೊಳ್ಳಲು ಮರೆತರು. ಟ್ಯಾಕ್ಸಿಯು ಮತ್ತೊಬ್ಬರನ್ನು ಹೆಚ್‌ಎಎಲ್ ವಿಮಾನನಿಲ್ದಾಣಕ್ಕೆ ಕರೆದುಕೊಂಡುಹೋಗಿ ಬೆಟ್ಟಾಗ ಈ ಸೂಟ್‌ಕೇಸ್ ಇದ್ದುದು ಕಂಡುಬಂದಿತು. ಕೂಡಲೇ ಡ್ರೈವರ್ ರಸೂಲ್ ಎಂಬಾತನು ಸೂಟ್‌ಕೇಸನ್ನು ಮದುಮೆತಂಡಕ್ಕೆ ತಲುಪಿಸಿದನು. ಅವನಿಗೆ ರೂ. 20 ಮತ್ತು ಕೆಲವು ಬಟ್ಟೆಗಳು ಬಹುಮಾನ ಸಲಾಯಿತು.

ಉಪಾಧ್ಯಾಯರ ಸಂಬಳ

ಮೈಸೂರು— ಪ್ರೈಮರಿ ಅಥವಾ ಹೈಸ್ಕೂಲು ಉಪಾಧ್ಯಾಯರ ಸಂಬಳ ರೂ. 300 ಕ್ಕೆ ಕಡಮೆಯಿರಬಾರದೆಂದು ವಿದ್ಯಾಮಂತ್ರಿ ಶ್ರೀ ಶಂಕರಗೌಡರು ಉಪಾಧ್ಯಾಯರ ಕೂಟದಲ್ಲಿ ಹೇಳಿದರು.

★

ರಾಜಕೀಯ ಖೈದಿಗಳ ಬಿಡುಗಡೆ

ಬೆಂಗಳೂರು— ಬಿಜಾಪುರ ಜಿಲ್ಲೆಯ 59 ಜನರಿಗೆ ಸರಕಾರ ರಾಜಕೀಯ ಖೈದಿಗಳ ಮಂಜೂರಾತಿ ಮಾಡಿದೆ.

★

ಬೆಂಗಳೂರು ಕಾರ್ಪೊರೇಷನ್

ಬೆಂಗಳೂರು—ನಗರ ಕಾರ್ಪೊರೇಷನ್ನಿನ ಆಡಳಿತ ಬದಲುಗೊಳ್ಳದಿದ್ದರೆ ತಾವು ಸತ್ಯಾಗ್ರಹ ಹೂಡುವುದಾಗಿ ಸುದ್ದಿ ಸಮ್ಮೇಳನದಲ್ಲಿ ತಿಳಿಸಿದರು — ಆಲ್ಲಿಯ ಪರಿಸ್ಥಿತಿಯನ್ನು ಕಟುವಾಗಿ ಟೀಕಿಸಿದರು.

★

ಕೊಲೆಪಾತಕ ವಿದ್ಯಾರ್ಥಿ

ಅಲಹಾಬಾದು— 67 ನೇ ಏಪ್ರಿಲ್‌ನಲ್ಲಿ ಲೌಡಾರ್ ಎಂಬ ಪರೀಕ್ಷೆಗೆ ಕೂತಿದ್ದ ವಿದ್ಯಾರ್ಥಿಯು ಕಾಪಿಮಾಡುತ್ತಿದ್ದಾಗ ಹಿಡಿದ ಪರೀಕ್ಷಾ ಮೇಲ್ವಿಚಾರಕನನ್ನು ಇರಿದು ಕೊಂದಿದ್ದಕ್ಕಾಗಿ ವಿಧಿಸಲ್ಪಟ್ಟಿದ್ದ ಮರಣ ದಂಡನೆಯನ್ನು ಹೈಕೋರ್ಟು ಖಾಯಂ ಮಾಡಿತು.

★

ಪಾಕಿಸ್ತಾನದ ಸೂಚನೆ

ರಾವಲ್ಪಿಂಡಿ— ಪೆಷಾವರಿನಲ್ಲಿರುವ ಅಮೇರಿಕರ ಸಂಪರ್ಕ ನಿಲ್ದಾಣವನ್ನು ಮುಚ್ಚಲು ಅಮೇರಿಕಾ ಪಾಕಿಸ್ತಾನಕ್ಕೆ ತಿಳಿಸಿದೆ

★

ಸಾಧುವಿನ ತಪಸ್ಸು

(ಮುಂದುವರಿದುದು)

ಸಾಧುವನ್ನು, ಏತಕ್ಕೆ ಹೀಗೆ ಮಾಡುತ್ತಿದ್ದೀಯೆ? ಎಂದು ಪ್ರಶ್ನಿಸಿದ್ದಕ್ಕೆ– ಪ್ರಪಂಚದಲ್ಲಿ ಶಾಂತಿ ನೆಲೆಸಲು, ಏನ್ನುತ್ತಾನೆ. ಆತನ ತಪಸ್ಸಿದ ಸಭ್ಯದ ಹಂತದಲ್ಲಿ ಅಮೇರಿಕಾ ಆಧ್ಯಕ್ಷರು ವಿಯಟ್ನಾಂ ಯುದ್ಧ ನಿಲ್ಲಿಸಲೂ, ಎರಡು ವಿರುದ್ಧ ದೇಶಗಳೂ ರಾಯಭಾರಿ ಮಟ್ಟದಲ್ಲಿ ಮಾತುಕತೆ ನಡೆಸಲೊಪ್ಪಿರುವದೂ ಆಶ್ಚರ್ಯವಾಗಿದೆ. ಪ್ರಾಯಶಃ ಇದೊಂದು ತಾರ್ಕಣೆ ಎನ್ನಬಹುದು.

ಇನ್ನೊಂದು ಸ್ವಾರಸ್ಯವೇನೆಂದರೆ– ಈ ಅತಿ ಶಾಖವಾದ ನಗರಪಲ್ಲಿನ ಹವಾ, ಆ ಸಾಧು ಅಗ್ನಿಯೊಡನೆ ತಪಸ್ಸು ಪ್ರಾರಂಭಿಸಿದಾಗ, ಪ್ರಕೃತಿಯು ಸಹಾನುಭೂತಿ ವ್ಯಕ್ತಪಡಿಸಲಿದೆ ಎಂಬಂತೆ, ಹವಾ ತಂಪಾಗುವದು.

ಶ್ರೀ ಹರಿಯು ಈ ತಪಸ್ಸನ್ನು ಮೆಚ್ಚಿ ಸಾಧುವನ್ನು ಅನುಗ್ರಹಿಸಲಿ. ಕಲಿಯುಗದಲ್ಲಿ ತಪಸ್ಸು ನಿಶೇಧಿಸಲಾಗಿದ್ದರೂ, ಈ ಸಾಧುವಿನ ತಪಸ್ಸಿಗೆ ತಿರಸ್ಕಾರ ತೋರಿಸದಿರಲಿ.

(ಟೈಮ್)

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ಸಿಮ್ಮಲ್ಲಿ ದೊರೆಯುತ್ತವೆ

ಗೋವಧೆಕೂಡಲೆ ನಿಶೇಧವಾಗಲಿ

Cow Slaughter should be banned Immediately

SHAKTI

SUDHA

A Superb Tonic

Protect the Cow

ಗೋರಕ್ಷಣೆ ಮತ್ತು ಪಶ್ಚಿಮದಯೂ ಕಾರ್ಯಗಳು ಯಶಸ್ವಿಯಾಗಿ ನಡೆಯಲಿ

ಶ್ರೀದಿವ್ಯಜ್ಞಾನ ಜಗದ್ಗುರು ಮಹಾಸಂಸ್ಥಾನಗಳವರು ಶ್ರೀ ಶೃಂಗೇರಿ ಜಗದ್ಗುರು

ಮಹಾಸಂಸ್ಥಾನಗಳವರ ಆಶೀರ್ವಾದ ಅಪ್ಪಣೆಯಂತೆ ಪ್ರಕಟಿಸಲಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪಶ್ಚಿಮದಯೆ, ಶಾಖಾಹಾರ, ಪಶುವೈದ್ಯ,

ವಿಚಾರಗಳ ವಿಶೇಷ ಪ್ರಚಾರ ಮಾಡುವುದಕ್ಕೆ ; ವಾರ್ಷಿಕ ಚಂದಾ 50 ಪೈಸೆ

Quality Printing — Neat Binding

Lakshminarasimha Press

Sivarampet, Mysore

ವುಡ್‌ಲಾಂಡ್ಸ್ ಜನವರಿಯು 3 ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ಸಾಜಿದ್ ಹುಸೇನ್

ಅಚ್ಚಲ ಸಹದೇವ್, ಎ. ಎಸ್. ಜೋಹರ್ [ದಿನ 3 ಪ್ರದರ್ಶನ]

ಅಮೋಘ 2ನೇ ವಾರ

ಆಪೇರ—

.... ಅಮೋಘ ಕನ್ನಡ ಚಿತ್ರ ....

ಬೆಂಗಳೂರು ಮೇಲ್

ಪಾತ್ರ : ರಾಜಕುಮಾರ್ ನರಸಿಂಹರಾಜು ಕೊಟ್ಟಾರಕರ್

ಅಶ್ವತ್ಥ್ ಜಯಂತಿ ವಿಜಯಲಲಿತ

Help The Gorakshana

ಗೋರಕ್ಷಣೆಗೆ ಜೊಂಬಲ ನೀಡಿ

— ಗೋರಕ್ಷಣೆ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣೆಗೆ ತೋಟಿಸಗಳನ್ನೂ ಪ್ರೋತ್ಸಾಹ ಧನವನ್ನೂ

ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾಪಾಯಿದೆ ಕಳೆದಿರುವವರು ಇವಂಲ್ಲಿ ಚಂದಾ ತಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತನಂಜಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಿಸಭಾ ಹೊಂಗನೂರು

ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು-4

ವಿಳಾಸ—ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharn Nirata M S Krishna Rao (Proprietor) at the Satyavadi Press Chamarajapuram, Mysoe 4